**1ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ದಿಃ 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆಂಚಪ್ಪಾ ಮುತ್ತೇಪ್ಪಾ ಶಿಂತ್ರಿ |
| ವಯಸ್ಸು | - | 65 ವರ್ಷ |
| ಉದ್ಯೋಗ | - | - |
| ಸಾಕೀನ | - | ಅಡಿಬಟ್ಟಿ |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ;**

ಸುಮಾರು 15ವಷಗಳ ಹಿಂದೆ ನನ್ನ ಹಾಗೂ ಅರ್ಜಿದಾರಳ ವಿವಾಹವು ಅಡಿಬಟ್ಟಿಯ ನಮ್ಮ ಮನೆಯ ಮುಂದೆ ನೆರವೇರಿದ್ದು, ನಂತರ 3-4 ವರ್ಷ ನನ್ನ ಜೊತೆ ವೈವಾಹಕ ಜೀವನವನ್ನು ನಡೆಸಿದ್ದು. ನಂತರ ಅರ್ಜಿದಾರಳು ಹೆರಿಗೆಗ ತವರು ಮನೆಗೆ ಹೋಗಿದ್ದು. ನಂತರ ನನ್ನ ವಿರುದ್ದ ಜೀವನಾಂಶ ಕೊರಿ ಅರ್ಜಿ ಸಲ್ಲಿಸಿದ್ದು, ನಂತರ ಪಾಲು ವಿಭಾಗ ಕೋರಿ ದಾವೆ ಸಲ್ಲಿಸಿ, ಸದರಿ ದಾವೆಯಲ್ಲಿ ರಾಜಿ ಆಗಿ ಅರ್ಜಿದಾರಳಿಗೆ 1 ಲಕ್ಷ 10 ಸಾವಿರ ರೂಪಾಯಿ ನೀಡಿದ್ದು, ನನ್ನ ಮಗಳ ಹೆಸರಿನಲ್ಲಿ ಠೆವಣಿ ಮಾಡಿದ್ದು ನಂತರ ದಾವೆ ಹಾಗೂ ಸದರಿ ಜೀವನಾಂಶ ಅರ್ಜಿ ರಾಜಿ ಮೂಲಕ ಕೊನೆಗೊಂಡವು. ನಂತರ ಈಗಲೂ ಸಹ ಅರ್ಜಿದಾರಳು ನನ್ನ ಜೊತೆ ವೈವಾಹಕ ಜೀವನ ನಡೆಸಲು ಬಂದಿರುವುದಿಲ್ಲ. ಈಗ ನನ್ನ ಮಗಳು ಸಹ ನನ್ನ ವಿರುದ್ದ ಪಾಲು ವಿಭಾಗ ಕೊರಿ ದಾವೆ ಸಲ್ಲಿಸಿರುತ್ತಾಳೆ.

2. ನಾನು ಅರ್ಜಿದಾರಳಿಗೆ ಯಾವುದೆ ತೊಂದರೆ, ಕಿರುಕುಳ ನೀಡಿರುವುದಿಲ್ಲ. ನಾನು ಈಗಾಗಲೆ ನನ್ನ ಪಾಲಿನ ಒಂದು ಎಕರೆ ಹೊಲ ಮಾಟಾರ ಮಾಡಿ ಜೀವನಾಂಶವನ್ನು ಅರ್ಜಿದಾರಳಿಗೆ ನೀಡಿದ್ದು, ಈಗ ನನ್ನ ಹತ್ತಿರ ಜೀವನಾಂಶ ನೀಡಲು ಹಣವಿರುವುದಿಲ್ಲ, ಮತ್ತು ನಾನು ಸಶಕ್ತನಾಗಿರುವುದಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

( ಚೈತ್ರಾ ಕುಲಕರ್ಣಿ )
ಹೆ.ದಿ.&ನ್ಯಾದಂ., ಗೋಕಾಕ.